ಸಾಕ್ಷಿಯನ್ನು ದಿನಾಂಕಃ 04-07-2017 ರಂದು ಕರೆದು ಪ್ರಮಾಣ ಮಾಡಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ.ಬಿ.ಸಿ.ಹೆಚ್. ವಾದಿ ಪರ ವಕೀಲರಿಂದ

ಈ ದಿನ ನಾನು ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಆದರಲ್ಲಿ ಬರೆದಿರುವ ಸಂಗತಿಗಳು ಸರಿಯಾಗಿವೆ. ನಾನು ಈ ದಾವೆಯಲ್ಲಿ ಕೆಲವೊಂದು ದಾಖಲಾತಿಗಳನ್ನು ಹಾಜರಪಡಿಸಿದ್ದು ಅವುಗಳನ್ನು ನನ್ನ ಪರವಾಗಿ ನಿಶಾನೆಗೊಳಪಡಿಸುವ ಬಗ್ಗೆ ಮುಂದುವರೆದ ಮುಖ್ಯ ವಿಚಾರಣೆ ಇರುತ್ತದೆ. ನಾನು ಈ ದಾವೆಯಲ್ಲಿ ರಿ.ಸ.ನಂ.190/ಅ/3 ಲೋಕಾಪೂರ ಹೋಬಳಿಗೆ ಸಂಬಂಧಿಸಿದ ಉತಾರವನ್ನು ಹಾಜರಪಡಿಸಿದ್ದು ಆದನ್ನು ನಿಪಿ-1 ಎಂದು ಗುರುತಿಸಲಾಯಿತು. ಉಪ-ನೊಂದಣಾಧಿಕಾರಿಗಳ ಕಚೇರಿಯಿಂದ ದೃಢೀಕರಿಸಲ್ಪಟ್ಟ ಸ್ಥಿರ ಸ್ವತ್ತಿಗೆ ಸಂಬಂಧಿಸಿದ ರಿಜಿಸ್ಟರನ ಪ್ರತಿಯನ್ನು ಹಾಜರಪಡಿಸಿದ್ದು ತಕರಾರಿಗೆ ಒಳಪಟ್ಟು ಆದನ್ನು ನಿಪಿ-2 ಎಂದು ಗುರುತಿಸಲಾಯಿತು. ಮ್ಯುಟೇಶನ್ ಎಂಟ್ರಿಯ 2447 ಮತ್ತು 1683 ರ ರ ದೃಢೀಕೃತ ನಕಲುಗಳನ್ನು ಹಾಜರಪಡಿಸಿದ್ದು ಅವುಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ಆದ್ದರಿಂದ ನಾನು ದಾವೆಯಲ್ಲಿ ಕೋರಿರುವಂತೆ ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಪಾಟೀ ಸವಾಲಿಗಾಗಿ ಶ್ರೀ.ಐ.ಹೆಚ್.ಎಸ್.ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೇಳಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ಮುಧೋಳ

ಸಾಕ್ಷಿಯ ಸಹಿಃ